**3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ.**

**ಪಿ.ಸಿ.ಆರ್. ನಂ.4104/2018 ಚಾ ಸಾ-1**

| | |
|---|---|
| **ಸಾಕ್ಷಿದಾರರ ಹೆಸರು** | **ಹರೀಶ್ ಪಾಂಡುರಂಗ ಚಾರ್.** |
| **ತಂದೆಯ ಹೆಸರು** | **ಲೇಟ್.ಎಸ್. ಜಿ. ಪಾಂಡುರಂಗಚಾರ್.** |
| **ವಯಸ್ಸು** | **60 ವರ್ಷ** |
| **ಉದ್ಯೋಗ** | **ಡೈರೆಕ್ಟರ್, ಲೈಸರ್ ಇವೆಂಟ್ ಪ್ರೈ.ಲಿ.** |
| **ವಾಸ** | **ವಿದ್ಯಾಮಾನ್ಯ ನಗರ, ಬೆಂಗಳೂರು** |
| **ಪ್ರಮಾಣೀಕರಿಸಿದ ದಿನಾಂಕ** | **23.06.2025.** |

**ದಂ.ಪ್ರ.ಸಂ.ಕಲಂ. 200 ರಡಿಯಲ್ಲಿ ಸಾಕ್ಷಿಗೆ ಪ್ರಮಾಣ ಪೂರ್ವಕ ಹೇಳಿಕೆಃ**

2006 ರಲ್ಲಿ ನಾನು ಮತ್ತು ಮತ್ತೊಬ್ಬ ಕುಮಾರ್ ಎನ್ನುವವರು ಸೇರಿ ಲೈಸನ್ ಇವೆಂಟ್ ಪ್ರೈ.ಲಿ. ಕಂಪನಿಯನ್ನು ನಮ್ಮ ಸ್ವಂತ ಹಣವನ್ನು ಹೂಡಿಕೆ ಮಾಡಿ ಪ್ರಾರಂಭ ಮಾಡಿರುತ್ತೇವೆ. 2008 ರಲ್ಲಿ ದೂರುದಾರರಾದ ಮಂಜುನಾಥ ರವರು ಅವರ ಮನೆಯನ್ನು ರೂ.1ಕೋಟಿ ರೂಪಾಯಿಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವೆಸ್ಟ್ ಆಫ್ ಕಾರ್ಡ್ ರೋಡ್ ಶಾಖೆಯಲ್ಲಿ ಅಡಮಾನ ಮಾಡಿ ಹಣ ಪಡೆದಿರುತ್ತಾರೆ. ಸದರಿ ರೂ.1 ಕೋಟಿ ಹಣವನ್ನು ಲೈಸನ್ ಇವೆಂಟ್ ಪ್ರೈ.ಲಿ. ಕಂಪನಿಗೆ ಹೂಡಿಕೆ ಮಾಡಿರುತ್ತಾರೆ. ಅದರಂತೆ ಅವರು ನಿರ್ದೇಶಕರಾಗಿರುತ್ತಾರೆ. ಆರೋಪಿ ಮಹೇಶ್ ಬಾಬು ರವರು ನನಗೆ ಮತ್ತು ಕುಮಾರ್ ರವರಿಗೆ ಕೇವಲ ಪರಿಚಯವಾಗಿದ್ದನು ಹಾಗೂ ಮಂಜುನಾಥ ರವರಿಗೆ ತುಂಬಾ ಪರಿಚಯಸ್ತನಾಗಿದ್ದನು. ಆರೋಪಿ ಮತ್ತು ದೂರುದಾರರಾದ ಮಂಜುನಾಥ ರವರು ಎನ್.ಜಿ.ಇ.ಎಫ್ ಕಂಪನಿಯಲ್ಲಿ ಒಟ್ಟಿಗೆ ಕೆಲಸ ಮಾಡುತ್ತಿದ್ದರು. ದೂರುದಾರರು ತಮ್ಮ ಎಲ್ಲಾ ಕ್ರೇಡಿಟ್ ಕಾರ್ಡ್, ಚೆಕ್ ಬುಕ್ ಮತ್ತು ಡಿಜಿಟಲ್ ಸಿಗ್ನೇಚರ್ ಗಳನ್ನು ಮಾಡುವಂತಹ ಅಧಿಕಾರವನ್ನು ಆರೋಪಿಗೆ ಕೊಟ್ಟಿದ್ದರು. ಎರಡು ವರ್ಷಗಳ ನಂತರ ನಮ್ಮ ಕಂಪನಿಗೆ ಹೊಸ ಅಕೌಂಟೆಂಟ್ ಬಂದಿರುತ್ತಾರೆ . ಅವರು

ನಮ್ಮ ಕಂಪನಿಯ ಅಕೌಂಟ್ ನ್ನು ಪರಿಶೀಲನೆ ಮಾಡಿ, ನಮ್ಮ ಕಂಪನಿಗೆ ಸಂಬಂಧ ಇಲ್ಲದೇ ಇರುವವರಿಗೂ ಸಹ ಹಣವನ್ನು ವರ್ಗಾವಣೆ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. ನಂತರ ಮಂಜುನಾಥ ರವರು ಕ್ರಾಸ್ ಚೆಕ್ ಮಾಡಿರುತ್ತಾರೆ. ನಮಗೆ ಮ್ಯೂಸಿಕಲ್ ಫೌಟೆಂನ್ ಕಂಪನಿಯಿಂದ ಹಣ ಬರಬೇಕಾಗಿರುತ್ತದೆ, ನಾವು ಅವರನ್ನು ವಿಚಾರಣೆ ಮಾಡಿದಾಗ ಎಲ್ಲಾ ಹಣವನ್ನು ಆರೋಪಿ ಮಹೇಶ್ ಬಾಬು ರವರಿಗೆ ವರ್ಗಾವಣೆ ಮಾಡಿರುತ್ತೇವೆ ಎಂದು ತಿಳಿಸಿರುತ್ತಾರೆ. ಮೂನ್ ಭೀಮ್ ಎಂಟರ್ ಪ್ರೈಸಸ್ ರವರು ನಮಗೆ ಒಂದು ಲೇಟರ್ ನ್ನು ತೋರಿಸಿ ಅದರಲ್ಲಿ ಈ ಪ್ರಕರಣದ ಆರೋಪಿಯು ಲೈಸನ್ ಇವೆಂಟ್ ಪ್ರೈ.ಲಿ. ಕಂಪನಿಯಲ್ಲಿ ತಾನು ಒಬ್ಬ ಡೈರೆಕ್ಟರ್ ಎಂದು ತಿಳಿಸಿರುತ್ತಾನೆ. ಸದರಿ ಆರೋಪಿಯು ಮೂನ್ ಭೀಮ್ ರವರಿಗೆ ಒಂದು ಪತ್ರವನ್ನು ಬರೆದು ನೀವು ಕಂಪನಿಗೆ ಕೊಡಬೇಕಾಗಿದ್ದ ಹಣವನ್ನು ನನ್ನ ಹೆಸರಿಗೆ ವರ್ಗಾವಣೆ ಮಾಡಿ ಎಂದು ತಿಳಿಸಿರುತ್ತಾನೆ. ಈ ಪ್ರಕರಣದ ದೂರುದಾರರು ಕಂಪನಿಗೆ ಸಂಬಂದಪಟ್ಟ ಅಕೌಂಟ್ ನುನ ಕ್ರಾಸ್ ಚೆಕ್ ಮಾಡಿದ ಕಂಪನಿಗೆ ಸಂಬಂದಪಟ್ಟ ಸುಮಾರು ರೂ.40 ರಿಂದ 50ಲಕ್ಷ ಹಣ ಆರೋಪಿಯಿಂದ ದುರುಪಯೋಗವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಇದಾದ ನಂತರ ನಾನು ಮತ್ತು ದೂರುದಾರರು ಆರೋಪಿ ಮಹೇಶ್ ಬಾಬು ರವರನ್ನು ಕರೆದು ಏಕೆ ಹೀಗೆ ಆಗಿದೆ ಎಂದು ವಿಚಾರಿಸಿದಾಗ, ಆರೋಪಿಯು ತಾನು ಈ ರೀತಿ ಕಂಪನಿಯ ಹಣವನ್ನು ದುರುಪಯೋಗಪಡಿಸಿಕೊಂಡಿಲ್ಲ ಎಂದು ತಿಳಿಸಿರುತ್ತಾನೆ. ಆ ನಂತರ ನಮಗೂ ಮತ್ತು ಆರೋಪಿಯ ನಡುವೆ ಮನಸ್ತಾಪ ಉಂಟಾಗಿರುತ್ತದೆ. ಆ ನಂತರ ಆರೋಪಿಯು ಅವರ ಕಡೆಯವರನ್ನು ನಮ್ಮ ಮನೆಗೆ ಕರೆಯಿಸಿ ಕಂಪನಿಗೆ ಸಂಬಂದಪಟ್ಟ ಪ್ರಾಮೋಟರ್ ಷೇರ್ಸ್ ಗಳನ್ನು ಕೊಡಿ ಎಂದು ಬೆದರಿಕೆ ಹಾಕಿರುತ್ತಾನೆ.

2.ದಿ.26.08.2019 ರಂದು ನಾನು ನಮ್ಮ ಮನೆಯನ್ನು ಬೆಳಿಗ್ಗೆ 10.00 ಗಂಟೆ ಬಿಟ್ಟು ಆಫೀಸ್ ಗೆ ಹೋಗುತ್ತಿದ್ದಾಗ, ರಸ್ತೆಯಲ್ಲಿ ನನ್ನ ಅಡಗಟ್ಟಿ ನನ್ನನ್ನು ಕೆಳಗೆ ಬೀಳಿಸಿ ಆ ನಂತರ ನನ್ನನ್ನು ವೇಗವಾಗಿ ಎಳೆದುಕೊಂಡು ಒಂದು ಕಾರಿನಲ್ಲಿ ನನ್ನನ್ನು ಹಾಕಿಕೊಂಡು ಡಿ ಗ್ರೂಪ್

ನೌಕರರ ಖಾಲಿ ಜಾಗದಲ್ಲಿ ನನ್ನನ್ನು ಕಾರಿನ ಒಳಗೆ ಕೂರಿಸಿ ಸಾಕಷ್ಟು ಖಾಲಿ ಪೇಪರ್ ಗಳನ್ನು ಕೊಟ್ಟು ಇದಕ್ಕೆ ನೀನು ಸಹಿ ಮಾಡು ಎಂದು ಹೇಳಿರುತ್ತಾನೆ. ನಾನು ಸದರಿ ಖಾಲಿ ಪೇಪರ್ ಗಳಿಗೆ ಸಹಿ ಮಾಡುವುದಿಲ್ಲ ಎಂದು ಹೇಳಿದಾಗ ಒಂದು ಚಾಕುವಿನಿಂದ ನನಗೆ ತಿವಿಯಲು ಪ್ರಯತ್ನ ಪಟ್ಟಿರುತ್ತಾರೆ ಮತ್ತು ಪ್ರಾಣ ಬೆದರಿಕೆಯನ್ನು ಸಹ ಹಾಕಿರುತ್ತಾರೆ. ಅದಕ್ಕೆ ನಾನು ಹೆದರಿಕೊಂಡು ಎಲ್ಲಾ ಖಾಲಿ ಪೇಪರ್ ಗಳಿಗೆ ನನ್ನ ಸಹಿಗಳನ್ನು ಮಾಡಿರುತ್ತಾನೆ. ಅದರಲ್ಲಿ ಒಂದು ಪೇಪರ್ ನ್ನು ನೋಡಿದಾಗ, ಆರೋಪಿಯು ನನ್ನ ಸಹಿಗಳನ್ನು ಫೋರ್ಜರಿ ಮಾಡಿ ಡಿಜಿಟರ್ ಸಿಗ್ನೇಚರ್ ಗೆ ಅರ್ಜಿಯನ್ನು ಸಲ್ಲಿಸಿರುತ್ತಾನೆ. ಅದೇ ಸ್ಥಳದಲ್ಲಿ ನನಗೆ ಒಂದು ವಿಡಿಯೋ ಕಾಲ್ ಮಾಡಿಸಿ ಡಿಜಿಟಲ್ ಸಿಗ್ನೇಚರ್ ಗೆ ಕಾನ್ ಫೇರ್ ಗೆ ನನ್ನಿಂದ ಅನುಮತಿಯನ್ನು ಕೊಡಿಸಿರುತ್ತಾರೆ. ನಂತರ ಅವರ ಕೆಲಸ ಆದ ನಂತರ ನನ್ನನ್ನು ಕಾರಿನಿಂದ ಕೆಳಗೆ ಇಳಿಸಿ ಅಲ್ಲಿಂದ ಹೋರಾಟು ಹೋಗಿರುತ್ತಾರೆ.ಆ ನಂತರ ನಾನು ಫ್ರೋರ್ಟಿಸ್ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ಇದಾದ ನಂತರ ಒಂದು ತಿಂಗಳ ನಂತರ ನಾನು ಬ್ಯಾಡರಹಳ್ಳಿ ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿರುತ್ತೇನೆ. ಆರೋಪಿಯು ತುಂಬಾ ಪ್ರಭಾವಶಾಲಿ ವ್ಯಕ್ತಿಯಾಗಿದ್ದು, ಆತನಿಂದ ಜೀವಬೆದರಿಕೆ ಇರುವುದರಿಂದ ಆತನ ವಿರುದ್ದ ಸೂಕ್ತ ಕಾನೂನು ಕ್ರಮ ಕೈಗೊಂಡು ನನಗೆ ರಕ್ಷಣೆ ನೀಡಬೇಕು ಎಂದು ವಿನಂತಿಸಿಕೊಳ್ಳುತ್ತೇನೆ.

***ಮರುವಿಚಾರಣೆಃ ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**

**Advocate for complainant has filed the list of witnesses.**
**The witness by name Harish Pandurangachar is present and exmained as CW-2.**

Further sworn statement by complainant side is closed.
For Hearing. Call on 28.07.2025.

III Addl.C.J.M, Bengaluru.